3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2010 ಸಂಖ್ಯೆ:ಸಂವ್ಯಶಾಇ–47 ಶಾಸನ 2009, ದಿನಾಂಕ: 11ನೇ ಫೆಬ್ರವರಿ, 2010 ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010–2014ನೇ ಸಾಲಿನ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ನಿಯಮ 60 ರಡಿ ನಿಲುವಳಿ ಸೂಚನೆ ಮೇರೆಗೆ ಪ್ರಸ್ತಾಪಿಸಲು ಅನುಮತಿ ಕೋರಿಕೆ

ವಿಷಯ : (1) ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯು ಭೂಮಿ ಪರಿಹಾರ ನೀಡುವಲ್ಲಿ ಅಧಿಕಾರಿಗಳು ಹಾಗೂ ರಾಜಕೀಯ ಪಟ್ಟ ಭದ್ರ ಹಿತಾಶಕ್ತಿ ವ್ಯಕ್ತಿಗಳು ಸೇರಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವ ಬಗ್ಗೆ

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪ್ರದೇಶ ಕೈಗಾರಿಕೆ ಮಂಡಲಿಯಲ್ಲಿ ಸುಮಾರು 1,17,000 ಎಕರೆ ಜಮೀನನ್ನು ಸನ್ಮಾನ್ಯ ಕೈಗಾರಿಕೆ ಮಂತ್ರಿಗಳು ಈ ರಾಜ್ಯದಲ್ಲಿರುವ 20,000 ವಿದ್ಯಾರ್ಥಿಗಳ ಸಲುವಾಗಿ ಜಮೀನನ್ನು ಭೂಸ್ವಾಧೀನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದರಲ್ಲಿ ಉದಾಹರಣೆಗೆ ಹೇಳುವುದಾದರೆ ಒಂದು ಕಡೆ ಭೂಸ್ವಾಧೀನ ಮಾಡುವುದು ಇನ್ನೊಂದು ಕಡೆ ಮಧ್ಯವರ್ತಿಗಳ ಕಡೆಯಿಂದಲೋ ಅಥವಾ ಯಾರ ಕಡೆಯಿಂದಲೋ ಭೂಸ್ವಾಧೀನವನ್ನು ಕೈಬಿಡುವಂಥ ಕಾರ್ಯಕ್ರಮವನ್ನು ಮಾಡುವುದು. ಇದಕ್ಕೆ ಎರಡು ಉದಾಹರಣೆಯನ್ನು ನಾನು ಕೊಡುತ್ತೇನೆ. ಸುಮಾರು 2010 ರಲ್ಲಿ Notification No.1, ಸಂಖ್ಯೆ:ಸಿಎ 170 ಬೆಂಗಳೂರು, ಜನವರಿ 2010.

ಸಂಖ್ಯೆ:ಸಿಎ:170: ಬೆಂಗಳೂರು 11 ಜನವರಿ 2010 ಇದನ್ನು ಕೈಬಿಡಲಾಗಿದೆ. 28(1), 28(2) ಮತ್ತು 28(3) ಆದಮೇಲೆ ಇದನ್ನು ಕೈಬಿಡುತ್ತಾರೆಂದು ಒಂದು ಉದಾಹರಣೆಯನ್ನು ಕೊಡುತ್ತಾರೆ. ಇದೆ ತರಹ ಬೆಳ್ಳಂದೂರು ಕೆರೆ ಇದರಲ್ಲಿ 80 ಎಕರೆ ಪ್ರದೇಶ ಒಂದಲ್ಲ, ಎರಡಲ್ಲ, 2005ರಲ್ಲಿ 4(1) notification ಮಾಡಿ, 80 ಎಕರೆ ಪ್ರದೇಶವೆಂದರೆ ಕನಿಷ್ಟ ಇವತ್ತಿನ ಮಾರ್ಕೆಟ್ ರೇಟ್ 1200 ಕೋಟಿ ರೂಪಾಯಿಗಳಾಗುತ್ತದೆ. ಒಂದು ಎಕರೆ 15 ಕೋಟಿ ರೂಪಾಯಿಗಳೆಂದರೆ 80 ಎಕರೆಗೆ 10 ಕೋಟಿ ರೂಪಾಯಿ ತರಹ ಲೆಕ್ಕ ತೆಗೆದುಕೊಂಡರು 800 ಕೋಟಿ ರೂಪಾಯಿಗಳಾಗುತ್ತದೆ. ಬೆಳ್ಳಂದೂರು ಕೆರೆ ಅದು ರಿಂಗ್ ರೋಡ್‌ನ ಪಕ್ಕದಲ್ಲಿದೆ, 2005ರಲ್ಲಿ 4(1) ಮಾಡಿ ಇವತ್ತು ಕೈಬಿಡುತ್ತೇವೆನ್ನುವುದಾದರೆ ಅರ್ಥವೇನು? ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೊಸಕೋಟೆ ತಾಲ್ಲೂಕಿನ ಮುನಿಯಪ್ಪ ಬಿನ್ ಇವರಿಗೆ 2,84,000 ಕೋಟಿ ರೂಪಾಯಿಗಳ ಚೆಕ್ ನಾನು ಇದರ ಬಗ್ಗೆ ನಾನು ಮೊನ್ನೆ ದಿನ ಹೇಳಿದ್ದೇನೆ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡುವಂತಹ ವಿಚಾರವು ನಿಲುವಳಿ ಸೂಚನೆಗೆ ಹೇಗೆ ಬರುತ್ತದೆಂದು ಅದರ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : 8.12.2009 ರಲ್ಲಿ ಒಂದು ಟೆಂಡರ್‌ನ್ನು International Airport ಗೆ ಕರೆಯುತ್ತಾರೆ. ಒಟ್ಟು ಟೆಂಡರ್ ಕಾಸ್ಟ್ ಎಷ್ಟು ಎಂದರೆ 31,38,000.00 ಕೋಟಿ ರೂಪಾಯಿಗಳು, ಇನ್ನೊಂದು 25,94,000.00 ಕೋಟಿ ರೂಪಾಯಿಗಳು. ಅದೇ ರೀತಿಯಾಗಿ 2ನೇ ಟೆಂಡರ್ 16.12.2009 ರಲ್ಲಿ .....

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ರೇವಣ್ಣನವರೆ, ತಾವು ಹೇಳಿ. ನನಗಿಂತ ಜಾಸ್ತಿ ಅನುಭವ ಇರುವವರು. ನಿಮಗೆ ನಾವು ಪಾಠವನ್ನು ಹೇಳಿಕೊಡುವಂತಹ ಕೆಲಸ ಬರಬಾರದು. ನಿಮಗೆ ಪಾಠವನ್ನು ಹೇಳಿಕೊಡುವಂತಹ ಸ್ಥಿತಿ ಬರಬಾರದು. ಇದು adjournment motion ಹೇಗೆ ಆಗುತ್ತದೆ.? ಪೂರ್ತಿ ಎಲ್ಲಾ merit ಮೇಲೆ ಮಾತನಾಡಿಬಿಟ್ಟರೆ ಹೇಗೆ? ಇದು ರೂಲ್ 60 ಒಳಗಡೆ ಹೇಗೆ ಬರುತ್ತದೆ. ಇದು ಇತ್ತೀಚೆಗೆ ನಡೆದ ಪ್ರಕರಣವೇ, ಅದರ ಬಗ್ಗೆ ಅವರು ಮಾತನಾಡಲಿ.

ಅಧ್ಯಕ್ಷರು : ಸಂಕ್ಷಿಪ್ತ ಮಾಡಿ ಹೇಳಿ. ನೀವು ಮೂರು ಘಟನೆಯನ್ನು ಹೇಳುವುದು ಬೇಡ.

ಶ್ರೀ ಎಸ್. ಸುರೇಶ್‌ಕುಮಾರ್ : ಇದರಲ್ಲಿ ಒಂದು ವಿಷಯವಿಲ್ಲ. ಇಲ್ಲಿ ನಾಲ್ಕೈದು ವಿಷಯಗಳು combined ಇದೆ. ಇದು adjournment motion ಆಗುವುದಕ್ಕೆ ಸಾಧ್ಯವಿಲ್ಲ ಸ್ವಾಮಿ. It has become a habit everyday here.

ಅಧ್ಯಕ್ಷರು : Adjournment motion ಅಂದರೆ specific incident, recent occurrence ಆಗಿ ನಡೆದಿರುವಂತಹದ್ದು ಎಲ್ಲವು ಇದೆ. ತಾವು ಘಟನೆಯನ್ನು quote ಮಾಡಿದ್ದೀರಿ. ಹಾಗೆ ಮಾಡುವುದಕ್ಕೆ ನಿಲುವಳಿ ಸೂಚನೆಯಲ್ಲಿ ಹೇಗೆ ಬರುತ್ತದೆಂಬುದನ್ನು ಮಾತ್ರ ಹೇಳಿ. ಅದರ ಬಗ್ಗೆ details ಹೇಳುತ್ತಾ ಹೋಗುವುದು ಬೇಡ. Please.

ಶ್ರೀ ಹೆಚ್.ಡಿ.ರೇವಣ್ಣ : ಲೂಟಿ ನಡೆಯುತ್ತಿದೆ ಎನ್ನುವುದನ್ನು ಗಮನಕ್ಕೆ ತರುವುದರ ಬಗ್ಗೆ ಆ ಬಗ್ಗೆ notification ಆಗಿರುವುದು ಈಗ.

ಅಧ್ಯಕ್ಷರು : That is different. ಅದೇ ಬೇರೆ. ನೀವು adjournment motion ನ್ನು ಕೊಟ್ಟಿದ್ದೀರಿ. A adjournment motion, rule 60 ಒಳಗಡೆ ಯಾವುದು ಬರುವುದಿಲ್ಲ, ಯಾವುದು ಬರುತ್ತದೆ ಎಂಬುದು ಅದರಲ್ಲಿ ಬಹಳ ಸ್ಪಷ್ಟವಾಗಿದೆ. ನೀವು ಎತ್ತಿದಂತಹ ವಿಚಾರವು ಅದರ ವ್ಯಾಪ್ತಿಯೊಳಗಡೆ ಬರುತ್ತದೆ ಎನ್ನುವುದನ್ನು ಮಾತ್ರ ತಾವು ಪ್ರಸ್ತಾಪ ಮಾಡಿ please.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ.....

ಶ್ರೀ ಎಸ್.ಸುರೇಶ್‌ಕುಮಾರ್ : ಇದು ನಿಲುವಳಿ ಸೂಚನೆಯಾಗ ಬೇಕಾದರೆ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚಿನ ವಿಷಯವನ್ನು ಚರ್ಚಿಸಕೂಡದು. ಇದರಲ್ಲಿ ಎಷ್ಟು ವಿಚಾರವಿದೆ ಎಂಬುದನ್ನು ನಾನು count ಮಾಡಿದ್ದೇನೆ. ಇವರು ಒಂದು ವಿಚಾರವಲ್ಲ, ನಾಲ್ಕು ವಿಚಾರಗಳನ್ನು ಮಂಡಿಸುತ್ತಿದ್ದಾರೆ. ಎರಡನೆಯದು ಬಹಳ ಮುಖ್ಯ ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕಷ್ಟೇ ಸೀಮಿತವಾಗಿರಬೇಕು. ಇದು ಯಾವಾಗ ಸ್ವಾಮಿ ನಡೆದಿರುವುದು, ಇದು ಕಳೆದ ತಿಂಗಳು ಆಗಿದೆಯೇ, ನಿನ್ನೆ ದಿನ ಆಗಿದೆಯೇ, ಹೋದವಾರ ಆಗಿದೆಯೇ,

adjournment motion ತರುವುದಕ್ಕೆ ಇದಕ್ಕೆ ಅರ್ಹತೆ ಎಲ್ಲಿದೆ? So, ದಯವಿಟ್ಟು ನಾನು ಕೇಳುತ್ತೇನೆ ಚರ್ಚೆ ಮಾಡುವುದು ಅಷ್ಟು ಮುಖ್ಯವೆಂದರೆ, ನೀವು 69ಗೆ convert ಮಾಡಿ ಅವಕಾಶವನ್ನು ಕೊಡಿ ಸರ್ಕಾರವು ಇದಕ್ಕೆ ಉತ್ತರವನ್ನು ಕೊಡುತ್ತದೆ. ಯಾವುದೇ ಕಾರಣಕ್ಕೆ ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಗೆ ಬರುವುದಿಲ್ಲ. ಇದಕ್ಕೆ ತಾವು ಬೇಗ ruling ಅನ್ನು ಕೊಡಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಇತ್ತೀಚಿನ ಘಟನಾವಳಿಯನ್ನು ಕೊಡಬೇಕೆಂದು ಹೇಳುತ್ತಾರೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯ ಹತ್ತಿರ ಒಟ್ಟು 4 ಟೆಂಡರ್‌ನ್ನು 102 ಕೋಟಿ ರೂಪಾಯಿಗಳಿಗೆ ಕರೆಯುತ್ತಾರೆ. ಈಗ recent ಆಗಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ನಾನು ಹೇಳುವುದಕ್ಕೆ ತಾವು ಸ್ವಲ್ಪ ಅವಕಾಶವನ್ನು ಕೊಡಬೇಕು. ಈಗ recent ಆಗಿ ಒಂದು ತಿಂಗಳ ಹಿಂದೆ ಟೆಂಡರ್‌ನ್ನು ಮಂತ್ರಿಗಳೆ, ದೂರವಾಣಿ ಮುಖೇನ, ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು ಅವರಿಗೆ ಬೇಕಾದವರಿಗೆ telephone ನಲ್ಲಿ ಸೂಚಿಸಿ 30 ಜನ ಕಂಟ್ರಾಕ್ಟರ್‌ದಾರರುಗಳು ಟೆಂಡರ್‌ನ್ನು ಹಾಕಿರುತ್ತಾರೆ. ಅವರಿಗೆ ಫೋನ್ ಮಾಡಿ 102 ಕೋಟಿ ರೂಪಾಯಿಗಳದು ಒಂದು, ಸೇರಿ ಒಟ್ಟು 450 ಕೋಟಿ ರೂಪಾಯಿಗಳ ಟೆಂಡರ್‌ನ್ನು ಕೆಐಎಡಿಬಿಯಲ್ಲಿ ಟೆಂಡರ್‌ನ್ನು ಕರೆದಿರುವುದು. 40% above ಇವರಿಗೆ. ಅದೇ ದಿವಸ same ಈ ಒಂದು ತಿಂಗಳಲ್ಲಿ ಆಗಿರುವುದು. ನಾನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಅಮೇಲೆ ಬೇಕಾದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ. ನೀವು Clarification ಬಗ್ಗೆ ನೀವು ಆಮೇಲೆ ಹೇಳಿ....

ಶ್ರೀ ಎಸ್.ಸುರೇಶ್‌ಕುಮಾರ್ : ಅವರು ಪೂರ್ತಿ ಹೇಳಿಬಿಟ್ಟು, ಸರ್ಕಾರ reply ಮಾಡದೆ ಇದ್ದರೆ ಹೇಗೆ? ಅವರು ಮಾತನಾಡಿರುವುದು ಮಾತ್ರ ಪತ್ರಿಕೆಯಲ್ಲಿ ಬಂತು. ಇದು ಏನಾಗುತ್ತದೆ? ಯಾವುದೇ ಕಾರಣಕ್ಕೆ ಇದಕ್ಕೆ ನಿಲುವಳಿ ಸೂಚನೆಯಲ್ಲಿ ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನಿಮಗೆ

ಮನಸ್ಸು ಇದ್ದರೆ convert ಮಾಡಿ. ಈಗ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಹೇಳುವವರೆಗೂ ಮಾನ್ಯ ಮಂತ್ರಿಗಳು ತಾಳ್ಮೆಯಿಂದಿರಬೇಕು. ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶವನ್ನು ಕೊಟ್ಟರೆ ಕೊಡಿ ಇಲ್ಲದೆ ಇದ್ದರೆ ಬಿಟ್ಟು ಬಿಡುತ್ತೇನೆ.

ಅಧ್ಯಕ್ಷರು : ತಾವು ಹೇಳುವಾಗ ನಿಲುವಳಿ ಸೂಚನೆಯನ್ನು ಬಿಟ್ಟು ಬೇರೆಯದನ್ನು ಹೇಳುತ್ತೀರಲ್ಲಾ.

ಶ್ರೀ ಹೆಚ್.ಡಿ.ರೇವಣ್ಣ : ನೀವು Law Minister ಹಾಗೂ ಕೈಗಾರಿಕಾ ಮಿನಿಸ್ಟರ್ ಇಬ್ಬರ ಮಾತನ್ನೇ ಕೇಳುವುದಾದರೆ ನನ್ನದೇನು ಅಭ್ಯಂತರವಿಲ್ಲ.

5. ಅಧ್ಯಕ್ಷರ ತೀರ್ಪು : ನಿಯಮ 60 ರಡಿ ಬದಲು ನಿಯಮ 69 ರಡಿ ಚರ್ಚಿಸಲು ಅವಕಾಶ ನೀಡಿಕೆ :

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣನವರು ಕೆಐಎಡಿಬಿ ಜಮೀನು ವಶಪಡಿಸಿಕೊಂಡು ಅದರಲ್ಲಿ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ ಎಂದು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ನಿಲುವಳಿ ಸೂಚನೆ ನಿಯಮ 60ರ ಪ್ರಕಾರ ಯಾವುದೇ ಒಂದು ನಿರ್ದಿಷ್ಟ ವಿಚಾರವನ್ನು ತರಬೇಕಾಗಿದೆ. ಹಾಗೆಯೇ ಇತ್ತೀಚಿನ ಘಟನಾವಳಿ ಯಾವುದು ಇದರಲ್ಲಿ ಪ್ರಸ್ತಾಪವಾಗಿಲ್ಲದಿರುವುದರಿಂದ ಇದನ್ನು ನಿಯಮ 60ರ ಬದಲಿಗೆ ನಿಯಮ 69ಕ್ಕೆ ಬದಲಾವಣೆ ಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ please. ಇವತ್ತಲ್ಲ, ಇದಕ್ಕೆ ದಿನವನ್ನು ನಿಗದಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಇವತ್ತೇ ಕೊಡಿ.

ಅಧ್ಯಕ್ಷರು : ಇವತ್ತು ಆಗುವುದಿಲ್ಲ. ಈ ಬಗ್ಗೆ ನಾನು ದಿನಾಂಕವನ್ನು ನಿಗದಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಇದರಲ್ಲಿ ಅವ್ಯವಹಾರಗಳು ನಡೆಯುತ್ತಿದೆ. ಕೈಗಾರಿಕೆಯಲ್ಲಿ 400 ಕೋಟಿ ರೂಪಾಯಿಗಳ ಟೆಂಡರ್‌ನ್ನು ಕರೆದು.. ಒಂದು ಕಡೆ ಫೋನ್ ಮಾಡಿ ದೂರವಾಣಿ ಮುಖೇನ ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಅದಕ್ಕೋಸ್ಕರ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಇವತ್ತೆ ಅವಕಾಶವನ್ನು ಕೊಡಿ.